# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 428 |
| 2 | ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 04.02.2021 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

<table>
<tr><th>ಪ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಐ.ಎಂ.ಎ. ಹಗರಣದಲ್ಲಿ ನೇರವಾಗಿ ಭಾಗಿಯಾಗಿರುವ ಕುರಿತು ಸಿ.ಬಿ.ಐ. ನಿಂದ ಕೋರ್ಟ್‌ಗೆ ಆರೋಪ ಪಟ್ಟಿ ಸಲ್ಲಿಕೆಯಾಗಿರುವ ಎಷ್ಟು ಅಧಿಕಾರಿಗಳನ್ನು ಅಮಾನತ್ತುಗೊಳಸಲಾಗಿದೆ: ಹೆಸರು ಹುದ್ದೆಯೊಂದಿಗೆ ವಿವರ ನೀಡುವುದು;</td><td>ಐ.ಎಂ.ಎ. ಹಗರಣದಲ್ಲಿ ನೇರವಾಗಿ ಭಾಗಿಯಾಗಿರುವ ಕುರಿತು ಸಿ.ಬಿ.ಐ. ನಿಂದ ಕೋರ್ಟ್‌ಗೆ ಆರೋಪ ಪಟ್ಟಿ ಸಲ್ಲಿಕೆಯಾಗಿರುವ ಒಟ್ಟು 04 ಅಧಿಕಾರಿಗಳನ್ನು ಅಮಾನತ್ತುಗೊಳಸಲಾಗಿರುತ್ತದೆ.<br><br><u>ವಿವರ ಕೆಳಕಂಡಂತಿದೆ.</u><br><br>
<table>
<tr><th>ಕ್ರ.ಸಂ.</th><th>ಹೆಸರು/ಹುದ್ದೆ/ಶ್ರೇಯುತ</th><th>ಆದೇಶ ಸಂಖ್ಯೆ</th></tr>
<tr><td>1</td><td>ಎಲ್.ಸಿ. ನಾಗರಾಜ, ಕೆ.ಎ.ಎಸ್. (ಕಿ.ಶ್ರೇ) ಹಿಂದಿನ ಉಪ ವಿಭಾಗಾಧಿಕಾರಿ, ಬೆಂಗಳೂರು (ಉತ್ತರ)</td><td>ಸಿಆಸುಇ 88 ಕೆಇವಿ 2019, ದಿ: 09-07-2019.</td></tr>
<tr><td>2</td><td>ಇ.ಬಿ. ಶ್ರೀಧರ, ಡಿವೈಎಸ್‌ಪಿ. ಸಿಐಡಿ, ಆರ್ಥಿಕ ಅಪರಾಧಗಳ ವಿಭಾಗ, ಬೆಂಗಳೂರು.</td><td rowspan="3">ಹೆಚ್‌ಡಿ 212 ಪೊಸಿಪ 2019, ದಿ: 17-10-2020</td></tr>
<tr><td>3</td><td>ಎಂ. ರಮೇಶ್, ಅಂದಿನ ಪೊಲೀಸ್ ಇನ್ಸ್‌ಪೆಕ್ಟರ್, ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆ, ಬೆಂಗಳೂರು.</td></tr>
<tr><td>4</td><td>ಪಿ. ಗೌರಿ ಶಂಕರ್, ಅಂದಿನ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆ, ಬೆಂಗಳೂರು.</td></tr>
</table>
</td></tr>
</table>

| | | |
|---|---|---|
| ಆ) | ಇದುವರೆಗೆ ಐ.ಎಂ.ಎ. ಹಗರಣದ ಸಂತ್ರಸ್ಥರಿಗೆ ಯಾವ ರೀತಿಯ ಪರಿಹಾರಗಳನ್ನು ನೀಡಲಾಗಿದೆ; | ಸರ್ಕಾರವು ಐಎಂಎ ಹಾಗೂ ಅದರ ಅಂಗಸಂಸ್ಥೆಗಳ ವಂಚನೆ ಪ್ರಕರಣದಲ್ಲಿ ಅಂದಾಜು ರೂ. 475 ಕೋಟಿ ಮೌಲ್ಯದ ಚರ/ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಮಾಡಿ ಅದೇಶಿಸಿರುತ್ತದೆ. ಸರ್ಕಾರದ ಮಧ್ಯಂತರ ಮುಟ್ಟುಗೋಲು ಆದೇಶಗಳನ್ನು ಮಾನ್ಯ ವಿಶೇಷ ನ್ಯಾಯಾಲಯವು ಅಂತಿಮ ಮುಟ್ಟುಗೋಲು ಆದೇಶ ಮಾಡಬೇಕಾಗಿರುತ್ತದೆ. ಸಕ್ಷಮ ಪ್ರಾಧಿಕಾರವು ಸದರಿ ಸ್ವತ್ತುಗಳ ಅಂತಿಮ ಮುಟ್ಟುಗೋಲು ಆದೇಶ ಕೋರಿ ಮಾನ್ಯ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಿರುತ್ತದೆ. ವಿಶೇಷ ನ್ಯಾಯಾಲಯವು ಕೆಲವು ಕಡಿಮೆ ಮೌಲ್ಯದ ಒಟ್ಟು ರೂ. 5,92,26,301/- ಗಳ ಮೊತ್ತದ ಸ್ವತ್ತುಗಳನ್ನು ಅಂತಿಮಗೊಳಿಸಿರುವುದನ್ನು ಹೊರತುಪಡಿಸಿ ಹೆಚ್ಚಿನ ಸ್ವತ್ತುಗಳ ಅಂತಿಮ ಆದೇಶ ಹೊರಡಿಸಲು ಬಾಕಿ ಇರುತ್ತದೆ.<br>ಮಾನ್ಯ ವಿಶೇಷ ನ್ಯಾಯಾಲಯವು ಸ್ವತ್ತುಗಳ ಅಂತಿಮ ಆದೇಶ ಹೊರಡಿಸಿದ ನಂತರ ಸಕ್ಷಮ ಪ್ರಾಧಿಕಾರದಿಂದ ಸದರಿ ಸ್ವತ್ತುಗಳ ಹರಾಜು ವಿಲೇವಾರಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು. ಹರಾಜು ವಿಲೇವಾರಿ ಮಾಡಿದ ಸ್ವತ್ತುಗಳಿಂದ ನಗದೀಕೃತವಾದ ಹಣವನ್ನು ವಂಚನೆ ಪ್ರಕರಣದಲ್ಲಿನ ಕ್ಲೇಮುದಾರರಿಗೆ ಹಂಚಿಕೆ ಮಾಡಲಾಗುವುದು. |
| ಇ) | ಇದುವರೆಗೆ ಎಷ್ಟು ಜನರು ಮೋಸವಾಗಿರುವ ಕುರಿತು ದೂರು ನೀಡಿರುತ್ತಾರೆ; ಈ ಕುರಿತು ಸರ್ಕಾರ ಕೈಗೊಂಡ ಕ್ರಮವೇನು? | ಸಕ್ಷಮ ಪ್ರಾಧಿಕಾರವು ಕೆ.ಪಿ.ಐ.ಡಿ. ಕಾಯ್ದೆಯಡಿಯಲ್ಲಿ ಅವಕಾಶ ಕಲ್ಪಸಿರುವಂತೆ ಠೇವಣಿದಾರರಿಂದ ಕ್ಲೇಮು ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ. ಕ್ಲೇಮು ಸಲ್ಲಿಕೆ ಅವಧಿಯಲ್ಲಿ ಸುಮಾರು 65,000 ಠೇವಣಿದಾರರು ರೂ: 2,700/- ಕೋಟಿ ಮೊತ್ತದ ಕ್ಲೇಮು ಸಲ್ಲಿಕೆ ಮಾಡಿರುತ್ತಾರೆ. ಸಕ್ಷಮ ಪ್ರಾಧಿಕಾರವು ಸಲ್ಲಿಕೆಯಾದ ಕ್ಲೇಮುದಾರರ ಅರ್ಜಿಗಳನ್ನು ಪರಿಶೀಲಿಸಲಾಗುತ್ತಿದೆ. ಪರಿಶೀಲನಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ ನಂತರ ಮಾನ್ಯ ವಿಶೇಷ ನ್ಯಾಯಲಯವು ಅಂತಿಮ ಮುಟ್ಟುಗೋಲು ಅದೇಶ ಹೊರಡಿಸಿದ ಸ್ವತ್ತುಗಳ ವಿಲೇವಾರಿಯಿಂದ ನಗಧೀಕೃತಗೊಂಡ ಹಣವನ್ನು ಐ.ಎಂ.ಎ. ಠೇವಣಿದಾರರಿಗೆ ಹಂಚಿಕೆ ಮಾಡುವ ಕುರಿತು ಮಾನ್ಯ ವಿಶೇಷ ನ್ಯಾಯಾಲಯಕ್ಕೆ ವರದಿ ಸಲ್ಲಿಸಲಾಗುವುದು. |

**ಸಂಖ್ಯೆ: ಒಇ 39 ಪಿಇಜಿ 2021**

**(ಬಸವರಾಜ ಬೊಮ್ಮಾಯಿ)**
ಗೃಹ ಸಚಿವರು